ಮನೆ ಬಾಗಿಲಿಗೆ ಹಾಕಿದ ಬೀಗವನ್ನು ಬೀಗದ ಕೈ ಹಾಕಿ ಅವನು ತೆಗೆದ. ಯಾವುದೋ ಬೀಗಕ್ಕೆ ಯಾವುದೋ ಕೈ. ಛಕ್ ಅಂತ ಬಂದೇ ಬಿಡ್ತು. ಬಾಗಿಲು ತೆಗೆದ ಕೂಡಲೇ ದೂಳು ಮಿಶ್ರಿತವಾದ ಗಾಳಿ, ಶಾಲೆ ಬಿಟ್ಟ ಹುಡುಗನಂತೆ ಓಡಿ ಬಂದಿತು. ದೂಳಿನ ಹೊಗೆ ಮುಖಕ್ಕೆ ರಾಚಿ ಸೀನು ಬಂತು. ಅಲ್ಲೊಂದು ಕವರ್ ಕಾಲಿಗೆ ತೊಡರಿತು. ಒಡೆದು ನೋಡಿದ.

“ರಂಗಣ್ಣ, ಮನೆಕಡೆ ಹುಷಾರ್. ನಾವೀಗ ಕಾಶಿ ಯಾತ್ರೆಗೆ ಹೊರಟ್ಟಿದ್ದೇವೆ. ಬರಲು ಒಂದು ತಿಂಗಳಾಗುತ್ತೆ. ತಿಂಗಳಿಗಾಗುವ ಸಾಮಾನು ಮನೆಯಲ್ಲಿದೆ. ಲೈಟ್ ಬಿಲ್ ಕಟ್ಟಿದೆ. ಮನೆ ಬಾಡಿಗೆ ಕೊಟ್ಟಿರುವೆ. ಡೈರಿ ಹಾಲಿನವನಿಗೆ ದುಡ್ಡು ಅಡ್ವಾನ್ಸ್ ಕೊಟ್ಟಿರುವೆ. ನೀನು ಮನೆ ಕಡೆ ನೋಡಿಕೋ. ನೀನಿದ್ದಿ ಎಂದು ಈ ಯಾತ್ರೆ ಸಲೀಸಾಗಿ ನಡೆಯುತ್ತಿದೆ. ಇಂತಿ ನಮಸ್ಕಾರಗಳು” —ಶಾಮಸುಂದರ ರಾವ್.

ಯಾರಿದು ರಂಗಣ್ಣ? ಅವನು ಹೇಗಿರುವನೋ? ಎಲ್ಲಿರುವನೋ? ಅವನು ಬಂದರೆ ನಾನು ಜಾಗ ಖಾಲಿ ಮಾಡಬೇಕು? ದಾರಿಯಲ್ಲಿ ಸಿಕ್ಕ ಅನೇಕಾನೇಕ ಬೀಗದ ಕೈಗಳು ನನ್ನ ಹೊಟ್ಟೆಯ ಹಸಿವಿನ ಸಮಸ್ಯೆಗೆ ಉತ್ತರ ಎಂದು ಖುಷಿಯಿಂದ ಇದ್ದೆ. ಈ ರಂಗಣ್ಣ ಈಗ ತಲೆ ಹಾಕುತ್ತಿದ್ದಾನೆ ಎಂದು ಈ ಕಥಾನಾಯಕ ಪ್ರಕಾಶ್ ಬಹಳ ಬೇಜಾರಾದ.

ಬಿಸಿಲುಕೋಲಿನ ಜತೆ ಆಡುವ ಕಸ, ದೂಳು ತುದಿಗೇರಿ ಇಳಿವ ಪರಿ ನೋಡಿದ. ಕಿಟಕಿ ಬಾಗಿಲು ತೆಗೆದು, ಮುಂಬಾಗಿಲಿಕ್ಕಿ ಆರಾಂ ಛೇರಿನಲ್ಲಿ ಒರಗಿದ.

ಅನೇಕ ದಿನಗಳಿಂದ ನಿಂತಿದ್ದ ಸಂಚಾರವನ್ನ ಅಲ್ಲಿನ ಗುಬ್ಬಿಗಳು ಮತ್ತೆ ಪ್ರಾರಂಭಿಸಿದವು. ಪುರ್ ಪುರ್ ಎಂದು ಹಾರಾಡುತ್ತ ಮಾಡಿನ ಗೂಡಿಗೆ ಹಾರಿದವು. ಕಸ, ಕಡ್ಡಿ, ಎರೆಹುಳು, ಹರಿದ ಪುಕ್ಕ ಎಲ್ಲವನ್ನ ನೆಲಕ್ಕೆ ತಂದು ಹಾಕುತ್ತಿದ್ದನ್ನ ನೋಡಿದ. ಅವು ಮತ್ತೆ ಮತ್ತೆ ಕಸ ಬೀಳಿಸುತ್ತ ಕಿಚ ಕಿಚ ಎನ್ನುತ್ತಿದ್ದವು. ಈಗ ಹಕ್ಕಿಯ ಗೂಡು ನಗಾಡತೊಡಗಿದೆ ಎನ್ನಿಸಿ ಆ ಗುಬ್ಬಿಗಳನ್ನ ಎಣಿಸತೊಡಗಿದ. ಹಣೆಮೇಲೆ ದಾಸು, ಒಂದು ಬೂದಿ ಬಣ್ಣದ್ದು, ಒಂದು ಕತ್ತಿನ ಕೆಳಗೆ ಕರೀ ಉಂಗುರದ್ದು, ಎಂದೆಲ್ಲ ಲೆಕ್ಕ ಹಾಕಿದರೂ ಲೆಕ್ಕ ತಪ್ಪುತ್ತಿತ್ತು. ಒಂದೆರಡು ಬಾರಿ ಹೊಸ ಹಕ್ಕಿಗಳು ಬಂದವೆನಿಸಿ ಮತ್ತೆ ಮತ್ತೆ ಆ ಗುರುತುಗಳನ್ನು ಕಂಡುಹಿಡಿಯತೊಡಗಿದ.

ಈಗ ರಣಗುಡುವ ಬಿಸಿಲಲ್ಲಿ ಯಾರು ಬರುತ್ತಾರೆ ಎಂದು ಧೈರ್ಯ ತಂದುಕೊಂಡ. ಆದರೂ ಹೊರಗೆ ಒಂದಿಷ್ಟು ಸದ್ದಾದರೆ—ರಂಗಣ್ಣ ಬಂದನೇ ಎಂದು ಬೆಚ್ಚಿ ಬೀಳುತ್ತಿದ್ದ.

ಮನೆಯನ್ನೆಲ್ಲ ನೋಡಿ ಬರಬೇಕು. ನಲ್ಲೀಲಿ ನೀರು ಬರಲ್ಲ, ತಂತೀಲಿ ಕರೆಂಟ್ ಇಲ್ಲ ಎಂದೆಲ್ಲ ಆಗಬಾರದು. ರೇಡಿಯೊ ಆನ್ ಮಾಡಿದ. ಯಾವುದೋ ಹಿಂದೂಸ್ತಾನಿ ಸಂಗೀತ ಬರುತ್ತಿತ್ತು. ಹಾಲ್, ರೂಂ, ಅಲ್ಲಿಂದ ಅಡಿಗೆ ಮನೆ... ಬಚ್ಚಲು. ನಲ್ಲೀಲಿ ನೀರಿದೆಯೇ ಎಂದು ತಿರುಗಿಸಿದ. ಫಿಸ್ ಎಂದು ಗಾಳಿ ಬರತೊಡಗಿ ಇನ್ನೇನು ನೀರು ಬರಲಿದೆ ಎಂದು ಸಾರ ತೊಡಗಿತು.

ಅಡಿಗೆ ಮನೆಯಲ್ಲಿ ಹುರಿದ ಬೇಳೆ, ಹರಿದ ಒಣಗಿದ ಬಾಳೆ ಎಲೆ, ಕಾಗದದ ಚೂರು, ಕಸ. ಒಣಗಿದ ಬಾಳೆ ಹಣ್ಣಿನ ಸಿಪ್ಪೆ. ಕೊಳೆತ ಟೊಮೆಟೊ. ಬದನೇಕಾಯಿ...